
# ಬೆಳಕಿನ ಸಂಚಲನ

ಸಂ 1, ಸಂ 4 ಆಗಸ್ಟ್ 2013



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

**ಅನು: ಶ್ರೀದೇವಿ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)

ಜಾಗೃತಿಯುಂಟಾಗುತ್ತಿದೆ. ಅನುಭಾವಿಕ ಮಟ್ಟದಲ್ಲಿ ಆಧ್ಯಾತ್ಮಿಕ ಜಾಗೃತಿಯುಂಟಾಗುತ್ತಿದೆ. ಇದು ಮಕ್ಕಳಲ್ಲಿ ಹೆಚ್ಚಾಗಿ ಆಗುತ್ತಿದೆ; ಲೈಟ್ ಚಾನಲಿಂಗ್ ಮಾಡುವಾಗ ಅವರಿಗಾದ ಅನುಭವಗಳು ಇದನ್ನು ಸೂಚಿಸುತ್ತವೆ.

ಹೆಚ್ಚು ಬೆಳಕು ಮಾನವ ಪ್ರಜ್ಞೆಗೆ ಇಳಿದು ಬರುತ್ತಿರುವುದರಿಂದಾಗಿ ಜಾಗೃತಿಯಾಗುತ್ತಿದೆ. ಹೆಚ್ಚು ಬೆಳಕು ಎಂದರೆ ಹೆಚ್ಚು ಚೈತನ್ಯಗಳು. ಹೆಚ್ಚು ಬದಲಾವಣೆಗಳು. ಹೆಚ್ಚು ಪರಿವರ್ತನೆ. ಸದ್ದಿಲ್ಲದ ಆಧ್ಯಾತ್ಮಿಕ ಕ್ರಾಂತಿಯೊಂದು ನೆಲೆಗೊಳ್ಳುತ್ತಿದೆ. ಪ್ರತಿಯೊಬ್ಬರೂ ಇದರಲ್ಲಿ ಭಾಗವಹಿಸಬಹುದು. ಈ ಸುಂದರವಾದ ಭೂಗ್ರಹಕ್ಕೆ ಹೊಸ ವಿಧಿಯನ್ನು ಬರೆಯಬಹುದು.

ಲೈಟ್ ಚಾನಲಿಂಗ್ ಒಂದು ಸಾಧಾರಣ ಕಾರ್ಯವಲ್ಲ. ಇದು ಬದುಕನ್ನು-ಬದಲಾಯಿಸುವ ವಿಧಿ-ನಿರ್ಮಿಸುವ ಕಾರ್ಯ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ನಾವು ವಿವಿಧ ಮಟ್ಟಗಳಲ್ಲಿ ತೀವ್ರತರದ ಗಲಭೆಯನ್ನು ವೀಕ್ಷಿಸುತ್ತಿದ್ದೇವೆ. ಈ ಗಲಭೆ ಸಕಾರಾತ್ಮಕ ಬದಲಾವಣೆಗಳನ್ನು ತರುತ್ತದೆ. ಪ್ರಳಯವೆಂದರೆ ಬದಲಾವಣೆ; ಸಾಮಾನ್ಯವಾಗಿ ತಿಳಿದಿರುವಂತೆ ವಿನಾಶವಲ್ಲ ಎಂದು ಮಹರ್ಷಿ ಅಮರ ವಿವರಿಸಿದ್ದರು. ಮನುಕುಲವು ಈ ಸಂಕಷ್ಟ ಪರಿಸ್ಥಿತಿಯನ್ನು ದಾಟುವುದಕ್ಕೆ ಸಹಾಯಮಾಡಲು ಈ ಜಗತ್ತಿಗೆ ಹೆಚ್ಚಿನ ಬೆಳಕಿನ ಅವಶ್ಯಕತೆಯಿದೆ. ನಮ್ಮ ಕಾರ್ಯಕರ್ತರು, ಶಾಲಾ ಆಡಳಿತವರ್ಗದವರು ಮತ್ತು ಮಕ್ಕಳು ಹೆಚ್ಚು ಬೆಳಕನ್ನು ತರಲು ಅದ್ಭುತವಾದ ಪ್ರಯತ್ನವನ್ನು ಮಾಡುತ್ತಿದ್ದಾರೆ. 1135 ಶಾಲೆಗಳ 5.15 ಲಕ್ಷ ಮಕ್ಕಳು ಪ್ರತಿದಿನ ತಮ್ಮ ಶಾಲೆಗಳಲ್ಲಿ ಲೈಟ್ ಚಾನಲ್ ಮಾಡುವುದಲ್ಲದೆ, ಜುಲೈ ತಿಂಗಳೊಂದರಲ್ಲೇ ಇನ್ನೂ 404 ಶಾಲೆಗಳ 1.6 ಲಕ್ಷ ಮಕ್ಕಳು ಸಹ ಲೈಟ್ ಚಾನಲ್ ಮಾಡಿದರು.

ಈ ಎಲ್ಲಾ ಪ್ರಯತ್ನಗಳು ವ್ಯರ್ಥವಾಗುವುದಿಲ್ಲ. ಈ ಪರಿಶುದ್ಧ ಆತ್ಮಗಳು ಹರಡಿದ ಬೆಳಕು ಪ್ರಪಂಚದ ಪ್ರತಿಯೊಬ್ಬರಿಗೂ ತಲುಪಿ, ಅವರಿಗೆ ಹೊಸ ಯುಗದೆಡೆಗೆ ವೇಗವಾಗಿ ಸಾಗಲು ಸಹಾಯಮಾಡುತ್ತದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

2009 ನೇ ವರ್ಷದಲ್ಲಿ ನಾವು ಲೈಟ್ ಚಾನಲಿಂಗ್‌ಗಾಗಿ ಶಾಲೆಗಳಿಗೆ ಹೋದಾಗ ಮಹರ್ಷಿ ಅಮರರವರು ನಮಗೆ ಪ್ರತಿ ಹೆಜ್ಜೆಯಲ್ಲೂ ಸ್ಫೂರ್ತಿ ನೀಡಿದರು. ಅವರ ಮಾರ್ಗದರ್ಶನ ಲೈಟ್ ಚಾನಲಿಂಗ್ ಕಾರ್ಯವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲು ಸಹಾಯಮಾಡಿತ್ತು. 'ವಿಶ್ವ ಸಂಚಲನದ ದಿನ'ದಂದು ಪ್ರತಿವರ್ಷ ನಿಗದಿಪಡಿಸಿದ ಗುರಿ ತಲುಪಲು ಅವರು ನಮ್ಮ ಜೊತೆ ಯಾವಾಗಲೂ ಇರುತ್ತಿದ್ದರು. ಆಗಸ್ಟ್ 25 ರಂದು ನಾವು ಅವರ ಮಹಾಸಮಾಧಿಯ ದಿನವನ್ನು ಆಚರಿಸಿದರೂ, ಅವರು 'ಮಾನಸ' ದ ಜೀವಂತ ಶಕ್ತಿ.

ಈ ವರ್ಷ ಲೈಟ್ ಚಾನಲಿಂಗ್ ಬಗ್ಗೆ ಶಾಲೆಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಂಡಿದ್ದೇವೆ. ಶಾಲಾ ಆಡಳಿತವರ್ಗದವರು ಲೈಟ್ ಮತ್ತು ಲೈಟ್ ಚಾನಲಿಂಗ್ ಬಗ್ಗೆ ಸಂಪೂರ್ಣ ವಿಶ್ವಾಸ ತೋರಿಸುತ್ತಿದ್ದಾರೆ ಮತ್ತು ಶಾಲಾ ಆವರಣದಲ್ಲಿ ಪ್ರತಿದಿನ ಲೈಟ್ ಚಾನಲಿಂಗ್ ಮಾಡಿಸಲು ಮುಂದಾಗುತ್ತಿದ್ದಾರೆ. ಇದು ಈ ಸಂಚಲನಕ್ಕೆ ಒಂದು ಶುಭ ವಾರ್ತೆ. ಲೈಟ್ ಚಾನಲಿಂಗ್ ಈಗ ಅತಿ ಅವಶ್ಯಕ ಮತ್ತು ಶಾಲೆಗಳು ಇದನ್ನು ಮೆಚ್ಚಿಕೊಂಡಿರುವುದು ನನಗೆ ಸಂತಸ ತಂದಿದೆ. ಬಹುಷಃ ಈ ಪ್ರಸಕ್ತ ಕಾಲದಲ್ಲಿ ಶಾಂತಿಯುತ ಪ್ರಪಂಚದೆಡೆಗೆ ಶೀಘ್ರವಾಗಿ ಹೋಗಲು ಇರುವುದು ಇದೊಂದೇ ಮಾರ್ಗ.

**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರಸ್ತೆ) ಬೆಂಗಳೂರು-560077 ಭಾರತ.

ಫೋನ್ : (080) 2846 5280, 99000 75280 (10 AM to 4 PM)

ಇ-ಮೇಲ್ : info@lightagemasters.com info@lightchannels.com

ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 -7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್ ಕಿನ್ಸ್, ನಂ. 890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ, 4ನೇ 'T' ಬ್ಲಾಕ್, ಜಯನಗರ
☎ 9448856629 ಶ್ರೀಮತಿ ಉಷಾ ಸತೀಶ್ಚಂದ್ರ

ಗುರುವಾರ (ಸಂಜೆ 6:30 - 7:00)
ನಂ. 312, ಹಂತ-4, ಗೋಲ್ಡನ್ ಪಾರ್ಕ್
ಅಪಾರ್ಟ್‌ಮೆಂಟ್, ಕೆ.ಸಿ.ಡಿ.ಸಿ. ಮುಖ್ಯರಸ್ತೆ,
ಬೊಮ್ಮನಹಳ್ಳಿ.
☎ 9886437042 ಡಾ. ರವಿಂದರ್ ಸಿಂಗ್ ಗೌರ್

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 5:30 - 6:00)
ಶ್ರೀ ರಂಗ ಕಲಾಕ್ಷೇತ್ರ, 13ನೇ ಅಡ್ಡರಸ್ತೆ,
2ನೇ ಹಂತ, ಇಂದಿರಾನಗರ
☎ 9900967005 ಶ್ರೀಮತಿ ಹೇಮಲತ ಪ್ರಮೋದ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ, 8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ, ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್, ಆಂಜನೇಯ ದೇವಸ್ಥಾನದ
ಎದುರು, ಅಶ್ವತ್ಥ ನಗರ ಮುಖ್ಯ ರಸ್ತೆ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಬೆಂಗಳೂರಿನ ಬಸವನಗುಡಿಯ ಲೈಟ್ ಚಾನಲಿಂಗ್ ಕೇಂದ್ರದಲ್ಲಿ ಚಾನಲಿಂಗ್ ಮಾಡುತ್ತಿರುವುದು

## ಪ್ರಮುಖ ಘಟನೆಗಳು

- ಫೆಬ್ರವರಿ 1, 2010 – 50 ಕ್ಕೂ ಹೆಚ್ಚು ಸ್ವಯಂಸೇವಕರ ತಂಡವೊಂದು ದಕ್ಷಿಣ ಭಾರತದ 50 ಶಾಲೆಗಳನ್ನು ಸಂಪರ್ಕಿಸಿ ಸುಮಾರು 30,000 ಮಕ್ಕಳಿಂದ ಲೈಟ್ ಚಾನಲಿಂಗ್ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನಕ್ಕೆ ಭಾರಿ ಚಾಲನೆ ನೀಡಿದರು.
- ಡಿಸೆಂಬರ್ 18, 2010 – 50 ಕ್ಕೂ ಹೆಚ್ಚು ಸ್ವಯಂಸೇವಕರ ತಂಡವೊಂದು ಮೈಸೂರು, ಬೆಂಗಳೂರು, ಚೆನ್ನೈ, ಮುಂಬೈ ಮತ್ತು ಹೈದರಾಬಾದ್‌ಗಳಲ್ಲಿರುವ 107 ಶಾಲೆಗಳಿಗೆ ಒಂದೇ ದಿನದಲ್ಲಿ ಭೇಟಿ ನೀಡಿ 62,000 ಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಮಾಡುವುದನ್ನು ಕಲಿಸಿಕೊಟ್ಟರು.
- ಫೆಬ್ರವರಿ 1, 2011, ವಿಶ್ವ ಚಾನಲ್‌ಗಳ ದಿನ – 130 ಸ್ವಯಂಸೇವಕರು ಭಾರತದಾದ್ಯಂತ ಸುಮಾರು 600 ಶಾಲೆಗಳಲ್ಲಿನ 4 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿಸಿದರು.
- ಜನವರಿ 18, 2012 – ಬೆಂಗಳೂರು, ಪುಣೆ, ಚೆನ್ನೈ ಮತ್ತು ಮಂಗಳೂರಿನ 11, 570 ಮಕ್ಕಳು 16 ವಿವಿಧ ಸೆಷನ್‌ಗಳಲ್ಲಿ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2012, ವಿಶ್ವ ಚಾನಲ್‌ಗಳ ದಿನ – ನೂರಾರು ಶಾಲೆಗಳ 6 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಮೇ 7, 2012 – ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಲೈಟ್ ಚಾನಲ್‌ಗಳ ಸಮಾವೇಶದಲ್ಲಿ ಸುಮಾರು ಒಂದು ಸಾವಿರ ಜನರು ಸೇರಿದ್ದರು. ಪ್ರಪಂಚದಾದ್ಯಂತ ಸಾವಿರಾರು ಜನರು ವೆಬ್‌ಕಾಸ್ಟ್ ಮತ್ತು ಮನೋಸಂಪರ್ಕಗಳ ಮೂಲಕ ತಮ್ಮ ತಮ್ಮ ಸ್ಥಳದಿಂದಲೇ ಭಾಗವಹಿಸಿ 15 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2013, ಮೂರನೇ ವಿಶ್ವ ಚಾನಲ್‌ಗಳ ದಿನ – ಭಾರತದಾದ್ಯಂತ 1868 ಶಾಲೆಗಳ ಸುಮಾರು 8.86 ಲಕ್ಷ ಮಕ್ಕಳು ಮತ್ತು ಅಧ್ಯಾಪಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜೂನ್ 29, 2013 - ಬೆಂಗಳೂರು, ಮೈಸೂರು, ಹೈದ್ರಾಬಾದ್, ಸಾಂಗ್ಲಿಯಲ್ಲಿನ 30 ಶಾಲೆಗಳಲ್ಲಿ ಮತ್ತು ಭಾರತದಾದ್ಯಂತ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ 13,449 ಮಕ್ಕಳು ಲೈಟ್ ಚಾನಲಿಂಗ್ ಮಾಡಿದರು.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4256 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 24.41 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1135 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.15 ಲಕ್ಷ |

## ಶಾಲೆಗಳಿಗೊಂದು ಮನವಿ

**ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ**

## ಜೀವನದ ಬೆಳಕು

**ಪದ್ಮಜ ಬಾಲಾಜಿ**

**ಅನು: ವಿಕಾಸ್ ಕಾರಂತ್**

ನನ್ನ ಗುರುಗಳು ನನ್ನ ಸೇವರ್ ಮಾತ್ರವಲ್ಲ ನನ್ನ ಮೊಬೈಲ್ ಸ್ಕ್ರೀನ್‌ಸೇವರ್ ಕೂಡ ಹೌದು! ನನ್ನ ಗೆಳತಿಯ 10 ವರ್ಷದ ಮಗಳು ಅವರ ಫೋಟೋ ನೋಡಿ 'ಇವರು ಯಾರು?' ಎಂದು ಕೇಳಿದಳು.

'ನನ್ನ ತಂದೆ' ಎಂದು ಉತ್ತರಿಸಿದೆ. ಮರುದಿನ ನಾವೆಲ್ಲರೂ ಸಿನೆಮಾ ನೋಡಲು ಹೋಗಿದ್ದೆವು. ಕಾರಿನಲ್ಲಿ ಹೋಗುವಾಗ ಆ ಹುಡುಗಿ 'ನಿನ್ನ ತಾಯಿ ಎಲ್ಲಿ?' ಎಂದು ಕೇಳಿ, ನನ್ನನ್ನು ಚಕಿತಗೊಳಿಸಿದಳು.

ನನ್ನ ತಂದೆ ಮತ್ತು ತಾಯಿ ಇಬ್ಬರೂ ಈಗ ಇಲ್ಲ. ಮೊಬೈಲ್‌ನಲ್ಲಿ ಇರುವವರು ನನ್ನ 'ಗಾಡ್ ಫ಼ಾದರ್' ಎಂದು ಹೇಳಬೇಕಾಯಿತು. ಜೊತೆಗೆ ಅವಳು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುತ್ತಾ ಗಾಡ್ ಫ಼ಾದರ್ ಎಂದರೆ ದೇವರ ಹಾಗೆ, ಈಗ ಅವರು ದೈಹಿಕವಾಗಿ ಇಲ್ಲದಿದ್ದರೂ ಯಾವಾಗಲೂ ನನ್ನ ಜೊತೆ ಇದ್ದು, ನನಗೆ ಮಾರ್ಗದರ್ಶನ ನೀಡುತ್ತಿದ್ದಾರೆ ಎಂದು ಹೇಳಿದೆ.

ಅವಳು ಕೂಡಲೆ ತನ್ನ ತಾಯಿಯ ಬಳಿ 'ನನಗೆ ಯಾಕೆ ಗಾಡ್ ಫ಼ಾದರ್ ಇಲ್ಲ, ನನ್ನ ಗಾಡ್ ಫ಼ಾದರ್ ಎಲ್ಲಿ? ಯಾವಾಗ ಸಿಗುತ್ತಾರೆ? ನಿಮಗೆ ಗಾಡ್ ಫ಼ಾದರ್ ಇದ್ದಾರ?.......' ಇತ್ಯಾದಿ ಪ್ರಶ್ನೆಗಳನ್ನು ಕೇಳಲಾರಂಭಿಸಿದಳು.

ನಾನು ಅವರ ಜೊತೆ ಇದ್ದ ಮೂರು ದಿನಗಳಲ್ಲಿ ಅವಳು ಗಾಡ್ ಫ಼ಾದರ್ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಸತತವಾಗಿ ಪ್ರಯತ್ನಿಸುತ್ತಿದ್ದಳು. ಈ ಸತ್ಯ ಇಷ್ಟು ಆಳವಾಗಿ, ತೀವ್ರವಾಗಿ ಮತ್ತು ಪ್ರಾಮಾಣಿಕವಾಗಿ ಅವಳ ಮನಮುಟ್ಟಿದ್ದು ನನಗೆ ಆಶ್ಚರ್ಯವಾಯಿತು. ಅನೇಕ ವಯಸ್ಕರಿಗೆ ಇಂಥಹ ವಿಚಾರದ ಬಗ್ಗೆ ಕೇಳುವುದಕ್ಕಾಗಲಿ ಅಥವಾ ತಿಳಿದುಕೊಳ್ಳುವುದಕ್ಕಾಗಲಿ ಆಸಕ್ತಿ ಇರುವುದಿಲ್ಲ. ಎಲ್ಲಾ ಮಕ್ಕಳಲ್ಲೂ ಕೂಡ ಈ ಬಗೆಯ ಅಂತರ್ ಪ್ರೇರಣೆ ಇರುವುದಿಲ್ಲ. ನಾನು ರೈಲಿನಲ್ಲಿ ಮರುಪ್ರಯಾಣ ಮಾಡುವಾಗ ನಮ್ಮ ಅನೇಕ ಸಂಭಾಷಣೆಗಳನ್ನು ಪರ್ಯಾಲೋಚಿಸಿದೆ. ಆಗ, ಅನೇಕ ಜನ್ಮಗಳ ನೆನಪನ್ನು ಹೊತ್ತ ನಮ್ಮ ಸುಪ್ತ ಪ್ರಜ್ಞೆ ನಮ್ಮ ಮೇಲೆ ಎಷ್ಟೊಂದು ಗಾಢವಾಗಿ ಪ್ರಭಾವ ಬೀರುತ್ತದೆ ಎಂಬುದನ್ನು ಮನಗಂಡೆ.

ಬುದ್ಧಿಯಲ್ಲಿ ಉಂಟಾದ ಎಲ್ಲಾ ಆಲೋಚನೆಗಳು ಶೀಘ್ರವಾಗಿ ಮನಸ್ಸಿಗೆ ಬರುತ್ತವೆ. ಅಲ್ಲಿ ಭಾವನೆಗಳು ಕೂಡಿಕೊಳ್ಳುತ್ತವೆ (ನಂತರದಲ್ಲಿ ಇದು ನಮ್ಮ ಕಾರ್ಯಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತವೆ). ಇವುಗಳೆಲ್ಲವೂ ಕಾಲಕ್ರಮೇಣ ಜಾಗೃತ ಮನಸ್ಸಿನ ಸ್ತರದಿಂದ ಸ್ವಪ್ನ ಮತ್ತು ಸುಶುಪ್ತಿಯ ಸ್ತರಗಳಿಗೆ ಹೋಗುತ್ತವೆ. ಹೀಗೆ ಸುಪ್ತ ಮನಸ್ಸು ಎಲ್ಲಾ ಆಲೋಚನೆಗಳ, ಭಾವನೆಗಳ ಮತ್ತು ಕಾರ್ಯಗಳ ಸ್ಟೋರ್ ಹೌಸ್ ಆಗಿದೆ, ಹಾಗೇ ಇವುಗಳನ್ನು ಪ್ರಜ್ಞಾ ಪೂರ್ವಕವಾಗಿ ಹೊರತೆಗೆಯದಂತೆ ರಕ್ಷಿಸುತ್ತದೆ.

ದೇವರ ಸೃಷ್ಟಿಯ ವೈಚಿತ್ರ್ಯವೆಂದರೆ, ಹೀಗೆ ಜನ್ಮ ಜನ್ಮಾಂತರಗಳಿಂದ ಕೂಡಿಟ್ಟ ನೆನಪುಗಳು ನಮ್ಮ ದೈನಂದಿನ ಕೆಲಸ ಕಾರ್ಯಗಳ ಮತ್ತು ನಿರ್ಧಾರಗಳ ಮೇಲೆ ಪ್ರಭಾವವನ್ನು ಬೀರುತ್ತಲೇ ಇರುತ್ತವೆ. ಸಾಮಾನ್ಯವಾಗಿ ನಮ್ಮ ಸುಪ್ತ ಮನಸ್ಸಿನ ಮೇಲೆ ನಮಗಿರುವ ನಿಯಂತ್ರಣ ಕಡಿಮೆ.

ಈ ಪುಟ್ಟ ಹುಡುಗಿಯ ವಿಚಾರದಲ್ಲಿ ಗಾಡ್ ಫ಼ಾದರ್ ಎನ್ನುವ ಪದ ಅವಳ ಸುಂದರ ಸುಪ್ತ ಮನಸ್ಸನ್ನು ಜಾಗೃತಗೊಳಿಸಿತು. ಈ ತರಹದ ಜಾಗೃತಿ ಅತಿ ವಿರಳ. ಆದರೆ ನಾವು ನಮ್ಮ ಸುಪ್ತ ಮನಸ್ಸಿನ ಶಕ್ತಿಯ ಬಗ್ಗೆ ಎದೆಗುಂದಬೇಕಾಗಿಲ್ಲ. ಪ್ರತಿದಿನ ಕೆಲವು ನಿಮಿಷಗಳ ಕಾಲ ನಮ್ಮ ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ದೈವೀಕ ಬೆಳಕಿನಿಂದ ತುಂಬಿ, ನಮ್ಮ ಶರೀರದ ಕಣ ಕಣದಲ್ಲೂ ಈ ಬೆಳಕನ್ನು ಅನುಭವಿಸುವುದರಿಂದ, ನಮ್ಮ ಸುಪ್ತ ಮನಸ್ಸಿನ ನಕಾರಾತ್ಮಕ ಪ್ರಭಾವ ಬದಲಾಗುವುದಲ್ಲದೆ ನಾವು ಸಕಾರಾತ್ಮಕರಾಗಿಯೇ ಮುಂದುವರೆಯಲು ಸಹಾಯ ಮಾಡುತ್ತದೆ. ಸತ್ಯವೇನೆಂದರೆ, ಬೆಳಕನ್ನು ಸದಾ ಹೊಂದಿರುವುದು ನಮ್ಮನ್ನು ದೈವೀಕ ಸ್ಥಿತಿಗೆ ಕೊಂಡೊಯ್ಯುತ್ತದೆ.

ಜೀವನವನ್ನು ಪ್ರೀತಿಸುವವನು ಎಲ್ಲರ ಜೀವನದಲ್ಲಿ ಬೆಳಕನ್ನು ತುಂಬಲು ಇಚ್ಛಿಸುತ್ತಾನೆ. ನೀವು ಇವರಲ್ಲಿ ಒಬ್ಬರಾಗಬೇಕೆಂದರೆ, ಬೆಳಕು ನಿಮ್ಮ ಸಿದ್ಧೌಷದವಾಗಿರಲಿ, ಧ್ಯಾನವಾಗಿರಲಿ, ಪ್ರಯಾಣ ಮತ್ತು ಗುರಿಯಾಗಿರಲಿ. ಇದೇ ಅತಿ ಸರಳ ಮಾರ್ಗ.

## ಲೈಟ್ ಚಾನಲಿಂಗ್ ಕೇಂದ್ರಗಳು

### ಮೈಸೂರು
ಬುಧವಾರ (ಸಂಜೆ 6)
ಇನ್ಫೋಸಿಸ್ ಲಿ, ಹೆಬ್ಬಾಳ್ ಎಲೆಕ್ಟ್ರಾನಿಕ್ಸ್ ಸಿಟಿ, ಹೂಟಗಳ್ಳಿ, ಮೈಸೂರು-570018
☎ 9980837179, ಶ್ರೀ ಆನಂದ್ ನಿರಂಜನ್
☎ 8095026224, ಶ್ರೀ ಆಕಾಶ್ ಮಲ್ಲಿಕ್

### ಸೋಲಾಪೂರ್
ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್
☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ
ಭಾನುವಾರ (ಬೆಳಿಗ್ಗೆ 10:00 -10:30) ನಂ. 481, ಸಾಯಿಪ್ರೇಮ್, 19 ನೇ ರಸ್ತೆ, 4ನೇ ಸೆಕ್ಟರ್, ಕೆ. ಕೆ. ನಗರ
☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್.


### ತಿರುನಲ್ವೇಲಿ
ಪ್ರತಿ ದಿನ (ಸಂಜೆ 7:00 - 7:30)
ವಡಕ್ಕು ತೆರು, ಚೆಲ್ಲಾ ಪಿಳ್ಳೈಯಾರ್ ಕುಲಮ್
ಎ.ಪಿ. ನಾದನೂರ್ ಪೋಸ್ಟ್
ಆಲಂಗುಲಮ್ ತಾಲ್ಲೂಕು - 627423
☎ 9444458747 ಶ್ರೀ ಮಾರಿಯಪ್ಪನ್ ಎನ್.

### ಪುಣೆ
ಶನಿವಾರ (ಸಂಜೆ 6.30 - 7.00)
3 B, ಕಪಿಲ ಹೌಸಿಂಗ್ ಸೊಸೈಟಿ, ಗೋಖಲೆನಗರ, ಪುಣೆ - 411016
☎ 9011038169 ಶ್ರೀ ಆಶುತೋಶ್ ನವನ್‌ಗುಲ್

ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ, ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್, ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

### ವಿಶಾಖಪಟ್ಟಣ
ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207, ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್, ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

### ಮೀರಜ್
ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463 ಶ್ರೀ ಮಹಾಜನ್



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಮಾರ್ಚ್ 27, 2013ರ ರಾತ್ರಿ ನಾನು ಒಂದು ದೊಡ್ಡ ಬೆಳಕಿನ ಕಿರಣವನ್ನು ಕಂಡೆ. ಅದನ್ನು 15-20 ದಿನಗಳವರೆಗೂ ನೋಡುತ್ತಲೇ ಇದ್ದೆ. ನಂತರ ನನ್ನ ಸ್ಟಾರ್ ಟೆಸ್ಟ್‌ಗೆ ಒಂದು ದಿನ ಮೊದಲು, ಗುರೂಜಿಯವರು ಮತ್ತು ಅಮರರವರು ಬಂದು ನನ್ನನ್ನು ಆಶೀರ್ವದಿಸಿದರು. 2-3 ದಿನಗಳ ನಂತರ, ಮತ್ತೊಮ್ಮೆ ಗುರೂಜಿಯವರು ಮತ್ತು ಅಮರ ರವರು ನನ್ನೊಂದಿಗೆ ಮಾತನಾಡಿದರು. “ನೀನು ಲೈಟ್ ಚಾನಲ್ಸ್ ವಿಶ್ವ ಸಂಚಲನದಲ್ಲಿ ಭಾಗ ವಹಿಸಲು ಬಯಸುತ್ತೀಯಾ?” ಎಂದು ಅಮರ ರವರು ಕೇಳಿದರು. ನಾನು ಅದರ ಬಗ್ಗೆ ಆಲೋಚಿಸುತ್ತೇನೆ ಎಂದು ಹೇಳಿದೆ. ಮಾರನೆಯ ದಿನ ರಾತ್ರಿ ನಾನು ಲೈಟ್ ಚಾನಲ್ ಮಾಡಿದೆ. ಅದಾದ ನಂತರ, “ನೀನೀಗ ಲೈಟ್ ಚಾನಲಿಂಗ್ ಗುಂಪಿನಲ್ಲಿದ್ದೀಯ” ಎಂದು ಅಮರರವರು ಹೇಳಿದರು. ಅಮರರವರು ಮತ್ತು ಗುರೂಜಿ ಯವರೊಂದಿಗೆ ಕೆಲವು ಋಷಿಗಳಿದ್ದರು. ಕೆಲವು ದಿನಗಳ ನಂತರ, ಲೈಟ್ ಚಾನಲ್ಸ್ ವಿಶ್ವ ಸಂಚಲನದ 5ನೇ ವಾರ್ಷಿಕೋತ್ಸವ ಹಾಗೂ ಗುರೂಜಿಯವರು ಹುಟ್ಟಿದ ದಿನವೂ ಆದ ಮೇ 18ಕ್ಕೂ ಮುಂಚೆ, ನನ್ನ ಅನುಭವವನ್ನು ಮಾನಸಕ್ಕೆ ಬರೆದು ತಿಳಿಸಬೇಕೆಂದು ಅಮರರವರು ನನಗೆ ಹೇಳಿದರು. ಗುರೂಜಿಯವರ ಹುಟ್ಟಿದ ದಿನದ ಗೌರವಾರ್ಥ ನೀವೆಲ್ಲರೂ ಲೈಟ್ ಚಾನಲ್ ಮಾಡಬೇಕೆಂದು ಬಯಸುತ್ತೇನೆ. ಧನ್ಯವಾದಗಳು.

– ಪೂಜಾ ಯಲ್ಲಾ, 4ನೇ ತರಗತಿ, ಸಾಕ್ರಮೆಂಟೋ, ಕ್ಯಾಲಿಫೋರ್ನಿಯ

ನಾನು ಪ್ರತಿದಿನವೂ ಲೈಟ್ ಚಾನಲ್ ಮಾಡುತ್ತೇನೆ, ಇದು ನನ್ನ ಪರೀಕ್ಷೆಗಳಲ್ಲಿ ಬಹಳ ಸಹಾಯವಾಗುತ್ತಿದೆ. ನನ್ನ ನೆನಪಿನ ಶಕ್ತಿ ಹೆಚ್ಚಾಗಿದೆ. ನಾನು ಓದಿದ್ದೆಲ್ಲವೂ ನೆನಪಿನಲ್ಲಿರುತ್ತದೆ. ಈಗ ಕಷ್ಟವಾದ ಪಠ್ಯಗಳನ್ನೂ ಸಹ ಓದಲು ಮತ್ತು ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ.

– ಎಲ್. ಶುಭ ಲಕ್ಷ್ಮಿ, 11ನೇ ತರಗತಿ, ವಳ್ಳಿಯಮ್ಮಾಳ್ ಬಾಲಕಿಯರ ಪ್ರೌಢಶಾಲೆ, ಕುಲಶೇಖರನ್ ಪಟ್ಟಿನಮ್

ನಾನು ಪ್ರತಿದಿನ ಬೆಳಿಗ್ಗೆ ಲೈಟ್ ಚಾನಲಿಂಗ್ ಮಾಡುತ್ತೇನೆ. ಇದರಿಂದ ನೆನಪಿನ ಶಕ್ತಿ ಹೆಚ್ಚಾಗಿದೆ. ಸಮಾಧಾನದಿಂದ ಇರುತ್ತೇನೆ, ಮತ್ತು ಚೆನ್ನಾಗಿ ಓದುತ್ತಿದ್ದೇನೆ. ಈಗ ಕಷ್ಟವಾದ ಪಠ್ಯಗಳನ್ನು ಸುಲಭವಾಗಿ ಗ್ರಹಿಸುತ್ತೇನೆ. ನನ್ನೊಳಗೆ ಶಾಂತಿ ನೆಲೆಸಿದೆ.

– ಕೆ. ಅಮುತ, 11ನೇ ತರಗತಿ, ವಲ್ಲಿಯಮ್ಮಾಳ್ ಬಾಲಕಿಯರ ಪ್ರೌಢಶಾಲೆ, ಕುಲಶೇಖರನ್ ಪಟ್ಟಿನಮ್

ನಾನು ಬೆಳಕಿನಿಂದ ಅನೇಕ ಪ್ರಯೋಜನಗಳನ್ನು ಪಡೆದುಕೊಂಡಿದ್ದೇನೆ. ಮನೆಯಲ್ಲಿ ನಮ್ಮ ತಂದೆ ಸಮಾಧಾನದಿಂದಿದ್ದಾರೆ ಹಾಗೂ ಶಾಲೆಯಲ್ಲಿ ನಾನು ಹೆಚ್ಚು ಅಂಕಗಳನ್ನು ಗಳಿಸಿದ್ದೇನೆ. ನಾನು ಈ ತಂತ್ರವನ್ನು ಬೇರೆಯವರಿಗೂ ಹೇಳಿಕೊಡುತ್ತೇನೆ. ಧನ್ಯವಾದಗಳು.

– ವಸಂತ್ ಕುಮಾರ್ ಎಮ್. ಆರ್, 10ನೇ ತರಗತಿ, ಸಂತ ಫಿಲೋಮಿನಾ ಪಬ್ಲಿಕ್ ಶಾಲೆ, ಬೆಂಗಳೂರು

ಪ್ರಾರಂಭದಲ್ಲಿ ಲೈಟ್ ಚಾನಲಿಂಗ್ ಕಲಿತಾಗ ನನಗೆ ತುಂಬಾ ಸಂತೋಷವಾಯಿತು. ಲೈಟ್ ಚಾನಲಿಂಗ್ ಅಭ್ಯಾಸ ಮಾಡಿದಾಗ ನನ್ನ ಮನಸ್ಸು ಹಗುರವಾದಂತೆ ಅನ್ನಿಸುತ್ತದೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡಲು ಸಾಧ್ಯವಾಗಿದೆ. ನನ್ನ ಸೋಮಾರಿತನ ಕಾಣೆಯಾಗಿದೆ. ನನ್ನ ನೆನಪಿನ ಶಕ್ತಿ ಹೆಚ್ಚಾಗಿದೆ ಮತ್ತು ನಾನು ಶಾಂತಿಯಿಂದ ಇದ್ದೇನೆ.

ಕ್ರಮೇಣವಾಗಿ, ಹೆಚ್ಚು ಹೆಚ್ಚು ಲೈಟ್ ಚಾನಲಿಂಗ್ ಮಾಡುತ್ತಿದ್ದೇನೆ, ಹಾಗೂ, ಈಗ ನಾನು ಪೂರ್ಣಪ್ರಮಾಣದಲ್ಲಿ ಬೆಳಕನ್ನು ಪಡೆದಂತೆ ಭಾಸವಾಗುತ್ತಿದೆ. ಲೈಟ್ ಚಾನಲಿಂಗ್ ತಂತ್ರವನ್ನು ಕಲಿಸಿಕೊಟ್ಟಿರುವುದಕ್ಕೆ ಧನ್ಯವಾದಗಳು.

– ಮುರುಗ ಲಕ್ಷ್ಮಿ ಕೆ, 2ನೇ ವರ್ಷ, ವಳ್ಳಿಯಮ್ಮಯ್ಯಾರ್ ಹಿಂದೂ ಟೀಚರ್ಸ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್, ಕುಲಶೇಖರನ್ ಪಟ್ಟಿನಮ್

ಲೈಟ್ ಚಾನಲಿಂಗ್ ಮಾಡಿದ ಮೊದಲ ಸಲವೇ ನನ್ನ ಮನಸ್ಸು ಶಾಂತವಾಯಿತು. ಇದರಿಂದ ನಾನು ಪ್ರತಿದಿನ ಚಾನಲಿಂಗ್ ಮಾಡುತ್ತಿದ್ದೇನೆ. ಮುಂಚೆ ನನಗೆ ಪದೇ ಪದೇ ತಲೆ ನೋವು ಬರುತ್ತಿತ್ತು. ನಿಧಾನವಾಗಿ ಅದು ಕಡಿಮೆಯಾಗುತ್ತಾ ಬಂದು ಈಗ ಸಂಪೂರ್ಣವಾಗಿ ಇಲ್ಲವಾಗಿದೆ. ಈಗ ನನಗೆ ಚೆನ್ನಾಗಿ ಓದಲು ಸಾಧ್ಯವಾಗುತ್ತಿದೆ.

– ಎಸ್. ದಿವ್ಯಾ, 1ನೇ ವರ್ಷ, ವಳ್ಳಿಯಮ್ಮಯ್ಯಾರ್ ಹಿಂದೂ ಟೀಚರ್ಸ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್, ಕುಲಶೇಖರನ್ ಪಟ್ಟಿನಮ್

ನಾನು ಬೆಳಿಗ್ಗೆ ಮತ್ತು ರಾತ್ರಿ ಲೈಟ್ ಚಾನಲಿಂಗ್ ಮಾಡುತ್ತೇನೆ. ಇದರಿಂದ ದಿನಪೂರ್ತಿ ಅರ್ಥ ಪೂರ್ಣವಾಗಿ ಕಳೆಯುತ್ತೇನೆ. ಯಾವಾಗಲಾದರೂ ನಾನು ಗೊಂದಲಕ್ಕೆ ಒಳಗಾದಾಗ ಲೈಟ್ ಚಾನಲಿಂಗ್‌ಗೆ ಮೊರೆ ಹೋಗುತ್ತೇನೆ, ಇದರಿಂದ ನನಗೆ ಸಮಾಧಾನ ಸಿಗುತ್ತದೆ. ಲೈಟ್ ಚಾನಲಿಂಗ್ ತಂತ್ರವನ್ನು ಪರಿಚಯಿಸಿದ್ದಕ್ಕಾಗಿ ಧನ್ಯವಾದಗಳು.

– ಬಿ. ಯಾಸ್ಮೀನ್, 11ನೇ ತರಗತಿ, ವಲ್ಲಿಯಮ್ಮಾಳ್ ಬಾಲಕಿಯರ ಪ್ರೌಢಶಾಲೆ, ಕುಲಶೇಖರನ್ ಪಟ್ಟಿನಮ್

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು ; ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ